ವಿಜಯವಾಣಿ
ಕನ್ನಡಿಗರ ಧ್ವನಿ

Friday 03rd November 2017

ವಿಜಯವಾಣಿ ನಂ 1

# ಆರ್.ವಿ.ಕಾಲೇಜಿನಲ್ಲಿ ಕನ್ನಡ ಹಬ್ಬ

## ತರಂಗದಿಂದ ವಿದ್ಯಾರ್ಥಿಗಳಲ್ಲಿ ಹೊಮ್ಮಿದ ಕನ್ನಡ ಕಂಪು



ಆರ್.ವಿ. ಕಾಲೇಜಿನಲ್ಲಿ ನಡೆದ ಕನ್ನಡ ಹಬ್ಬ 'ತರಂಗ'ದಲ್ಲಿ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ತಾಂತ್ರಿಕ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಯಿಂದ ದೇಶದೆಲ್ಲೆಡೆ ಖ್ಯಾತಿ ಪಡೆದಿರುವ ರಾಷ್ಟ್ರೀಯ ಮಹಾವಿದ್ಯಾಲಯದಲ್ಲಿ (ಆರ್.ವಿ. ಇಂಜಿನಿಯರಿಂಗ್ ಕಾಲೇಜ್) ಕನ್ನಡತನದ ತರಂಗಗಳು ಹರಿದಾಡುತ್ತಿವೆ. ಆ ಮೂಲಕ ಈ ಬಾರಿಯ ಕನ್ನಡ ಹಬ್ಬ 'ತರಂಗ' ಎಲ್ಲರ ಮನಸಿನಲ್ಲೂ ಕನ್ನಡ ಕಂಪಿನ ಅಲೆ ಎಬ್ಬಿಸಿದೆ.

» **17 ವರ್ಷಗಳಿಂದ ಆಚರಣೆ**

» **ಮನಸೆಳೆದ ನಾಟಕ 'ಕಿರಿಕ್ ಪಾಂಡವರು'**

ಭಾಷೆ ಬೆಳೆಸುವ ಹಂಬಲವಿರುವ ಕನ್ನಡ ಮನಸುಗಳು 'ಕನ್ನಡ ಸಂಘ'ವೆಂಬ ಹೆಸರಲ್ಲಿ 17 ವರ್ಷಗಳಿಂದ ಕನ್ನಡ ನಾಡು - ನುಡಿ ಸೊಬಗನ್ನು ಪ್ರದರ್ಶಿಸುವ 'ಕನ್ನಡ ಹಬ್ಬ' ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ. ಈ ಹಬ್ಬದ ನಿಮಿತ್ತ ವಿದ್ಯಾರ್ಥಿಗಳು ಒಂದು ತಿಂಗಳು ವೇದಿಕೆ ವಿನ್ಯಾಸ, ಕಾಲೇಜು ಆವರಣ ಅಲಂಕಾರ ಹಾಗೂ ದೇಸಿ ಸೊಗಡಿನ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳ ಆಯೋಜನೆಯಲ್ಲಿ ಪಾಲ್ಗೊಂಡಿದ್ದರು.

ಬೆಳಗ್ಗೆ ಡೊಳ್ಳು ಕುಣಿತ, ಕಂಸಾಳೆ, ಜಾನಪದ ಕುಣಿತಗಳನ್ನು ಒಳಗೊಂಡ ಅದ್ದೂರಿ ಮೆರವಣಿಗೆಯೊಂದಿಗೆ ಅತಿಥಿಗಳಾದ ಹಿರಿಯ ಸಾಹಿತಿ ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ಖ್ಯಾತ ಕ್ರೀಡಾಪಟು ಅರ್ಜುನ್ ದೇವಯ್ಯ ಅವರನ್ನು ಬರಮಾಡಿಕೊಳ್ಳಲಾಯಿತು.

ಇದಾದ ಬಳಿಕ ಕನ್ನಡನಾಡಿನ ಸಂಸ್ಕೃತಿಗೆ ಕನ್ನಡಿಯಾಗಿರುವ ಭರತನಾಟ್ಯ ಮತ್ತು ಯಕ್ಷಗಾನಗಳ 'ನಾಟ್ಯ ತರಂಗ' ನೋಡುಗರ ಕಣ್ಣಾಲಿಗಳನ್ನು ಅರಳಿಸಿದರೆ, ವಿದ್ಯಾರ್ಥಿಗಳ ಸುಮಧುರ ಕನ್ನಡ ಹಾಡುಗಳ 'ರಾಗ ತರಂಗ' ಕೇಳುಗನ ಹೃದಯ ಮುಟ್ಟುತಿತ್ತು. ವಿದ್ಯಾರ್ಥಿಗಳಿಗಿಂತ ನಾವೇನೂ ಕಡಿಮೆಯಿಲ್ಲ ಎಂದು ಪ್ರಸಿದ್ಧ ಹಾಡುಗಳಿಗೆ ಅಧ್ಯಾಪಕರು ವೇದಿಕೆ ಮೇಲೆ ಹೆಜ್ಜೆ ಹಾಕುತ್ತಿದ್ದರೆ ಕೆಳಗಿದ್ದ ವಿದ್ಯಾರ್ಥಿಗಳು ತಮ್ಮ ಇಷ್ಟದ ಅಧ್ಯಾಪಕರ ಹೆಸರು ಕೂಗಿ ಸಂಭ್ರಮಿಸಿದರು.

ಈ ಮಧ್ಯೆ ಕಿರಿಕ್ ಪಾರ್ಟಿಯ ಹುಡುಗಿ ಸಂಯುಕ್ತ ಹೆಗಡೆ ವೇದಿಕೆ ಏರಿ ಕುಣಿಯುವಾಗ ಹಾಕಿದ್ದ ಹಾಡಿಗಿಂತ ಜೋರಾಗಿ ಕೂಗೋ ಅಭಿಮಾನಿಗಳ ಧ್ವನಿ ಕೇಳುತ್ತಿತ್ತು. ವಿದ್ಯಾರ್ಥಿಗಳ ಸ್ವರಚಿತ ನಾಟಕ 'ಕಿರಿಕ್ ಪಾಂಡವರು' ನೆರೆದವರನ್ನು ನಗೆಗಡಲಲ್ಲಿ ತೇಲಿಸಿತು. ವೀರ ಯೋಧರ ತ್ಯಾಗಕ್ಕೆ ಸಮರ್ಪಣೆಯಾದ 'ಉತ್ತರಾಧಿಕಾರಿ' ಕಣ್ಣಂಚಲ್ಲಿ ಕಂಬನಿ ತುಂಬಿಸಿತು. ಸರಿಗಮಪ ಸ್ಪರ್ಧೆಯಲ್ಲಿ ಅಂತಿಮಘಟ್ಟ ತಲುಪಿದ ಸ್ಪರ್ಧಿಗಳು 'ಸಂಗೀತ ಸಂಜೆ'ಯಲ್ಲಿ ಜನಪ್ರಿಯ ಹಾಡುಗಳ ಮೂಲಕ ಪ್ರೇಕ್ಷಕರೆಲ್ಲ ಹುಚ್ಚೆದ್ದು ಕುಣಿಯುವಂತೆ ಮಾಡಿದರು.

> **ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂದುವರಿಯಲು ಆಂಗ್ಲ ಭಾಷೆ ಅನಿವಾರ್ಯ ಎಂದು ದೂರುವವರಿಗೆ 12ನೇ ಶತಮಾನದಲ್ಲಿ ವಚನ ಸಾಹಿತಿಗಳಿಂದಾದ ಕನ್ನಡ ಕ್ರಾಂತಿ ಬಗ್ಗೆ ತಿಳಿದಿಲ್ಲ ಎನಿಸುತ್ತದೆ. ಹಿಂದೆ ಪೂಜೆಗೆ ಕನ್ನಡ ಭಾಷೆ ಶಕ್ತವಾಗಿಲ್ಲ ಎಂಬ ಕಾರಣಕ್ಕೆ ಶ್ಲೋಕಗಳೆಲ್ಲ ಸಂಸ್ಕೃತಕ್ಕೆ ಸೀಮಿತವಾಗಿದ್ದವು. 12ನೇ ಶತಮಾನದ ವಚನ ಸಾಹಿತ್ಯ ಆ ಆಪಾದನೆ ಮೀರಿ ಬೆಳೆಯಿತು. ಅದೇ ರೀತಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲೂ ಸ್ವಭಾಷಾ ಬಳಕೆ ರೂಢಿಗೆ ತರಬೇಕು.**
>
> । ನರಹಳ್ಳಿ ಬಾಲಸುಬ್ರಹ್ಮಣ್ಯ ಹಿರಿಯ ಸಾಹಿತಿ